ಮೆ: ಕಲ್ಯಾಣಿ ಇಂಡಸ್ಟ್ರೀಸ್ ಒಪ್ಪಿ ಕೊಂಡಿದೆ. ಈ ಗ್ರಾಮಗಳಿಗೆ ಸಂಬಂಧಿಸಿದಂತೆ ಲೇಔಟ್ ಪ್ಲಾನ್ ತಯಾರಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ನೆರೆಯಿಂದಾಗಿ ನೊಂದ ಸಂತ್ರಸ್ಥರಿಗೆ ಪರಿಹಾರ ನೀಡುವುದರ ಬಗ್ಗೆ :

6 (35) ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬಂದ ಭಾರಿ ಮಳೆಯಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ವಿಜಯನಗರ ಕ್ಷೇತ್ರದಲ್ಲಿ ಸಂಭವಿಸಿದ ಒಟ್ಟು ನಷ್ಟದ ಅಂದಾಜು ಎಷ್ಟು;

ಆ) ನೆರೆಯ ಹಾವಳಿಯಿಂದ ನೊಂದ ಸಂತ್ರಸ್ಥರಿಗೆ ಈವರೆವಿಗೂ ಮಂಜೂರು ಮಾಡಲಾದ ಪರಿಹಾರ ಧನವೆಷ್ಟು;

ಇ) ಸಂತ್ರಸ್ಥರಿಗೆ ಇನ್ನು ಹೆಚ್ಚಿನ ಮಟ್ಟದಲ್ಲಿ ಪರಿಹಾರ ಒದಗಿಸುವ ಯೋಜನೆಗಳು ಸರ್ಕಾರದ ಹಂತದಲ್ಲಿಯೇ ಇದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಇತ್ತೀಚೆಗೆ ಬಂದ ಭಾರಿ ಮಳೆಯಿಂದ ಹೊಸಪೇಟೆ ತಾಲ್ಲೂಕಿನ ವಿಜಯನಗರ ಕ್ಷೇತ್ರವ್ಯಾಪ್ತಿಯಲ್ಲಿ ಒಟ್ಟು ರೂ. 1139.845 ಲಕ್ಷ ಹಾನಿ ಸಂಭವಿಸಿದೆ.

ಆ) ನೆರೆ ಹಾವಳಿಯಿಂದ ನೊಂದ ಸಂತ್ರಸ್ಥರಿಗೆ ಇದುವರೆಗೆ ಮಂಜೂರು ಮಾಡಲಾದ ಪರಿಹಾರ ಧನ ರೂ. 195.593 ಲಕ್ಷ.

ಇ) ಇಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡುವ ಬಗ್ಗೆ :

7 (258) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಶೆಟ್ಟಿ (ಬಿಜಾಪುರ ನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲೆಯಲ್ಲಿರುವ ಆಹಾರ ಸಂಸ್ಕರಣಾ ಘಟಕಗಳ ಸಂಖ್ಯೆ ಎಷ್ಟು, ಅವು ಯಾವುವು?

ಆ) ಇವುಗಳಲ್ಲಿ ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ಒಡೆತನದ ಘಟಕಗಳು ಎಷ್ಟು, ಅವು ಯಾವುವು?

ಇ) ಖಾಸಗಿ ವಲಯದಲ್ಲಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ದಿಮೆದಾರರಿಗೆ ಯಾವ ಯಾವ ಉತ್ತೇಜನ ಹಾಗೂ ರಿಯಾಯಿತಿಗಳನ್ನು ಸರ್ಕಾರ ನೀಡಲಿದೆ.

ಈ) ಬಿಜಾಪುರ ಜಿಲ್ಲೆಯು ಆಹಾರ ಧಾನ್ಯ ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆಯುವಲ್ಲಿ ಮುಂಚೂಣಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುವುದು, ಆ ಸ್ಥಳಗಳು ಯಾವುವು?

ಊ) ಈ ಆಹಾರ ಸಂಸ್ಕರಣಾ ಘಟಕಗಳು ಯಾವ ಹಂತದಲ್ಲಿದೆ, ಹಣ ಹೂಡಿಕೆಯಾಗುವ ಬಂಡವಾಳ ಎಷ್ಟು?

ಋ) ಈ ಆಹಾರ ಸಂಸ್ಕರಣಾ ಘಟಕಗಳು ಎಂದಿನಿಂದ ಕಾರ್ಯರಂಭ ಮಾಡಲಿದೆ. ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬಿಜಾಪುರ ಜಿಲ್ಲೆಯಲ್ಲಿ 1157 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಆಹಾರ ಸಂಸ್ಕರಣ ಘಟಕಗಳಿರುತ್ತವೆ. ಇವು ಜಿಲ್ಲೆಯಲ್ಲಿ ಬೆಳೆಯುವ ಸಿಟ್ರೆಸ್, ದಾಳಿಂಬೆ, ದ್ರಾಕ್ಷಿ (ವೈನ್ ತಯಾರಿಕೆಗೆ) ಮತ್ತು ಇತರೆ ಸಂಸ್ಕರಣ ಘಟಕಗಳು.

ಆ) ಬಿಜಾಪುರ ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದ ಯಾವುದೇ ಆಹಾರ ಸಂಸ್ಕರಣಾ ಘಟಕಗಳು ಇರುವುದಿಲ್ಲ.

ಜಿಲ್ಲೆಯಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ಆಹಾರ ಸಂಸ್ಕರಣ ಘಟಕಗಳು ಖಾಸಗಿ ಒಡತನದಲ್ಲಿರುತ್ತವೆ.

ಇ) ಕೇಂದ್ರ ಸರ್ಕಾರದ ವತಿಯಿಂದ ಪ್ರತಿ ಖಾಸಗಿ ಘಟಕಕ್ಕೆ ಸ್ಥಿರಾಸ್ತಿಯ ಮೇಲೆ ಶೇ. 25 ರಿಂದ ಗರಿಷ್ಠ ರೂ. 50.00 ಲಕ್ಷಗಳವರೆಗೆ

ಅನುದಾನ ನೀಡಲಾಗುವುದು. ಬಿಜಾಪುರ ಜಿಲ್ಲೆಯು ರಾಜ್ಯದ 2009–14ರ ಕೈಗಾರಿಕಾ ನೀತಿಯನ್ವಯ ವಲಯ 1 ಮತ್ತು 3ಕ್ಕೆ ಒಳಪಟ್ಟಿದ್ದು, ಈ ಕೆಳಕಂಡ ಉತ್ತೇಜನ ಮತ್ತು ರಿಯಾಯಿತಿಗಳು ಲಭ್ಯವಿರುತ್ತದೆ. ರಿಯಾಯಿತಿಗಳು ಲಭ್ಯವಿರುತ್ತದೆ.

1. ಬಂಡವಾಳ ಹೂಡಿಕೆ ಉತ್ತೇಜನ ಸಹಾಯಧನ ಶೇಕಡ 20ರಷ್ಟು.
2. ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ
3. ನೋಂದಣಿ ಶುಲ್ಕದಲ್ಲಿ ರಿಯಾಯಿತಿ
4. ಭೂ ಪರಿವರ್ತನಾ ಶುಲ್ಕದ ಮಾಪಿ ಪ್ರವೇಶ ತೆರಿಗೆ ವಿನಾಯಿತಿ ಹಾಗೂ 2009–14ರ ನೀತಿಯಲ್ಲಿರುವ ಇತರೆ ಸೌಲಭ್ಯಗಳು

ಈ) ಹೌದು.

ಉ) ರಾಜ್ಯ ಸರ್ಕಾರದ ಸಂಸ್ಥೆಯಾದ ಮೆ: ಆಹಾರ ಕರ್ನಾಟಕ ನಿಯಮಿತ ವತಿಯಿಂದ ಖಾಸಗಿ ಸಹಬಾಗಿತ್ವದೊಂದಿಗೆ ಆಹಾರ ಪಾರ್ಕ್‌ನ್ನು ಇಟ್ಟಂಗಿ ಹಾಳ ಗ್ರಾಮ, ಬಿಜಾಪುರ ತಾಲ್ಲೂಕಿನಲ್ಲಿ ಸ್ಥಾಪಿಸಲು ಯೋಜಿಸಿದೆ. ಸದರಿ ಆಹಾರ ಪಾರ್ಕ್‌ನಲ್ಲಿ ಸಿಟ್ರಸ್, ಬಾಳೆ, ದ್ರಾಕ್ಷಿ (ವೈನ್ ತಯಾರಿಕೆ), ದಾಳಿಂಬೆ ಹಾಗೂ ಸಾಂಬರ್ ಪದಾರ್ಥಗಳ ಸಂಸ್ಕರಣ ಘಟಕಗಳನ್ನು ಸ್ಥಾಪಿಸಬಹುದಾಗಿದೆ.

ಊ) ಇಟ್ಟಂಗಿಹಾಳ ಗ್ರಾಮ, ಬಿಜಾಪುರ ತಾಲ್ಲೂಕಿನಲ್ಲಿ ಸ್ಥಾಪಿಸಲು ನಿರ್ಣಯಿಸಿರುವ ಆಹಾರ ಪಾರ್ಕಿನ ನಿರ್ಮಾಣಕ್ಕಾಗಿ ಖಾಸಗೀ ಉದ್ಯಮಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಪ್ರಾರಂಭವಾಗಿರುತ್ತದೆ. ಮತ್ತು ಸದರಿ ಯೋಜನೆಯ ವೆಚ್ಚವು ರೂ.2384 ಲಕ್ಷಗಳೆಂದು ಅಂದಾಜು ಮಾಡಲಾಗಿರುತ್ತದೆ.

ಋ) ಮೇಲೆ ಹೇಳಿದಂತೆ, ಆಹಾರ ಪಾರ್ಕಿನ ಸ್ಥಾಪನೆಗಾಗಿ ಖಾಸಗೀ ಉದ್ಯಮಿಗಳ ಆಯ್ಕೆಯ ಪ್ರಕ್ರಿಯೆಯು ಪ್ರಾರಂಭವಾಗಿದ್ದು, ಮುಂದಿನ 30 ತಿಂಗಳುಗಳಲ್ಲಿ ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ. ಸರ್ಕಾರವು ಈ ಯೋಜನೆಗೆ Viability Gap Funding (VGF) ಅನ್ನು ಕೊಡಲು ನಿರ್ಧರಿಸಿದೆ.